ಸಿಸಿ ನಂಃ 5587/2021
ಸಿ.ಡ್ಬ್ಯೂ 6/ಪಿ.ಡಬ್ಲ್ಯೂ 3

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

**<u>ಸಿಸಿ ನಂಃ 5587/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮೇಘಶ್ರೀ ಅವರಸಾ |
| ತಂದೆಯ ಹೆಸರು | ಃ | ಪರಮೇಶ್ವರ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | ಃ | ವಿದ್ಯಾರ್ಥಿ |
| ವಾಸ ಸ್ಥಳ | ಃ | ಯಲ್ಲಾಪೂರ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 31-03-2023

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಚಾಸಾ-1 ನನ್ನ ತಂದೆ . 2021 ರ ಜೂನ್ ತಿಂಗಳಲ್ಲಿ ನಾನು ಯಲ್ಲಾಪೂರದ ನಮ್ಮ ಮನೆಯಲ್ಲಿದ್ದಾಗ ನನ್ನ ತಂದೆ ನನಗೆ ಪೋನ್ ಮಾಡಿ ಒಬ್ಬ ವ್ಯಕ್ತಿ ನನಗೆ ಹಿಡಿದುಕೊಂಡು ಹೆದರಿಸುತ್ತಿದ್ದಾನೆ ಎಂದು ಹೇಳಿದ್ದರು . ಆಗ ಮಃ 3.00 ರಿಂದ 3.30 ಗಂಟೆ ಸಮಯ ಆಗಿತ್ತು . ಸದರಿ ವ್ಯಕ್ತಿ ತನಗೆ ಎರಿಕೊಪ್ಪ ಹತ್ತಿರ ಹಿಡಿದುಕೊಂಡು ಹಣ ಕಿತ್ತುಕೊಂಡಿದ್ದಾನೆ ಎಂದು ನನ್ನ ತಂದೆ ನನಗೆ ಹೇಳಿದ್ದರು . ನಾನು ನನ್ನ ತಂದೆಗೆ ಪೋಲಿಸರಿಗೆ ಪೋನ್ ಮಾಡಿ ವಿಷಯ ತಿಳಿಸಲು ಹೇಳಿದ್ದೆ . ನಂತರ ನಾನು ನನ್ನ ತಂದೆಗೆ ಕರೆ ಮಾಡಿದ್ದೆ . ಆದರೆ ಅದು ನಾಟ್ ರಿಚೆಬಲ್ ಎಂದು ಬರುತ್ತಿದುದ್ದರಿಂದ ನಾನು 102 ನಂಬರಿಗೆ ಪೋನ್ ಮಾಡಿ ವಿಷಯ ತಿಳಿಸಿದ್ದೆ . ನಾನು ವಿದ್ಯಾಗಿರಿ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಸದರಿ ಸ್ದಳ ಬರುತ್ತದೆ ಎಂದು ಹೇಳಿದ್ದೆ . ನಂತರ ನಾನು ಮತ್ತು ನನ್ನ ತಾಯಿ ಯಲ್ಲಾಪೂರ ದಿಂದ ಕಾರ್ ಬಾಡಿಗೆ ಮಾಡಿಕೊಂಡು ಧಾರವಾಡಕ್ಕೆ ಬಂದಿದ್ದೆವು . ಆಗ ಅಲ್ಲಿ ಪೋಲಿಸರು ಬಂದಿದ್ದರು . ನಂತರ ನನಗೆ ನನ್ನ ತಂದೆ ಸದರಿ ವ್ಯಕ್ತಿ ತನ್ನಿಂದ ರೂ.5,000/- ಹಣ ಮತ್ತು ಅವರ ಪ್ಯಾನ್ ಕಾರ್ಡನ ಝೇರಾಕ್ಸ ಪ್ರತಿ ತೆಗೆದುಕೊಂಡು ಹೋಗಿದ್ದಾನೆ ಎಂದು ನನಗೆ ಹೇಳಿದ್ದರು . ಸದರಿ ವ್ಯಕ್ತಿ ನನ್ನ ತಂದೆಗೆ ಲಿಫ್ಟ ಕೊಡುತ್ತೇನೆ ಎಂದು ಹೇಳಿ ತನ್ನ ಬೈಕ್ ಮೇಲೆ ಕೂರಿಸಿಕೊಂಡು ಕರೆದುಕೊಂಡು ಹೋಗಿದ್ದ . ಆಗ ಕರೋನಾ ಆದ್ದರಿಂದ ಬಸ್ ವ್ಯವಸ್ದೆ ಇರಲಿಲ್ಲ . ಅದೇ ದಿನ ನನ್ನ ತಂದೆ ಸದರಿ ಘಟನೆಗೆ ಸಂಬಂಧಿಸಿದಂತೆ ದೂರು ನೀಡಿದ್ದರು . ಆ ಬಗ್ಗೆ ನಾನು ತನಿಖಾಧಿಕಾರಿ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ನನ್ನ ತಂದೆ ಮನೆ ಖರ್ಚಿಗಾಗಿ ರೂ. 5,000/- ಹಣ ತೆಗೆದುಕೊಂಡು ಊರಿಗೆ ಹೋಗಲು ಟೋಲ್ ನಾಕಾ ಹತ್ತಿರ ಯಾವುದಾದರೂ ವಾಹನಕ್ಕಾಗಿ ಕಾಯುತ್ತಿದ್ದರು ಎಂದರೆ ಸರಿ . ಆ ಸಮಯಕ್ಕೆ ಒಬ್ಬ 30-35 ವರ್ಷ ವಯಸ್ಸಿನ ವ್ಯಕ್ತಿ ನೀಲಿ ಬಣ್ಣದ ಜಿನ್ಸ ಪ್ಯಾಂಟ್ , ಹಸಿರು ಬಣ್ಣದ ಟಿ ಶರ್ಟ , ಮತ್ತು ಮಾಸ್ಕ ಧರಿಸಿಕೊಂಡು ಕಪ್ಪು ಬಣ್ಣದ ಹಿರೋ ಹೊಂಡಾ ಮೋಟರ್ ಸೈಕಲ್ ಮೇಲೆ ಬಂದು ತಾನು ಎರಿಕೊಪ್ಪವರೆಗೂ ಡ್ರಾಪ್ ಕೊಡುತ್ತೇನೆ ಎಂದು ಹೇಳಿ ನನ್ನ ತಂದೆಗೆ ತನ್ನ ಬೈಕ ಮೇಲೆ ಹತ್ತಿಸಿಕೊಂಡು ಹೋಗಿದ್ದ ಎಂದರೆ ಸರಿ . ಎರಿಕೊಪ್ಪ ಬೈಪಾಸ್ ನ ಅಂಡರ್ ಬ್ರಿಡ್ಜ ಹತ್ತಿರ ಹೋದಾಗ ಆತ ನನ್ನ ತಂದೆಗೆ ಬೆದರಿಸಿ ನಿನ್ನ ಹತ್ತಿರ ಎಷ್ಟು ಹಣ ಇದೆ ಕೊಡು ಎಂದು ಹೇಳಿ ಹಣ ಕೊಡದೇ ಇದ್ದರೆ ಕೊಂದೆ ಬಿಡುತ್ತೇನೆ ಎಂದು ಹೇಳಿ ಕಪಾಳಕ್ಕೆ ಹೊಡೆದಿದ್ದ ಎಂದರೆ ಸರಿ . ನನ್ನ ತಂದೆ ಆತನಿಂದ ತಪ್ಪಿಸಿಕೊಂಡು ಹೋಗುತ್ತಿದ್ದಾಗ ಆತ ಅವರನ್ನು ಅಡ್ಡಗಟ್ಟಿ ಅವರ ಜೇಬಿನಲ್ಲಿದ್ದ ರೂ.5,000/- ಹಣ ಕಿತ್ತುಕೊಂಡು ಹೋಗಿದ್ದ ಎಂದರೆ ಸರಿ . ಆತ ಹಣ ಕಿತ್ತುಕೊಂಡು ಧಾರವಾಡದ ಕಡೆಗೆ ಹೋಗಿದ್ದಾನೆ ನನಗೆ ಹೆದರಿಕೆ ಆಗುತ್ತಿದೆ ಎಂದು ನನ್ನ ತಂದೆ ನನಗೆ ಫೋನ್ ನಲ್ಲಿ ಹೇಳಿದ್ದರು ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರು ಇದ್ದು , ಆರೋಪಿತನು ಯಾವುದೇ ಪ್ರಶ್ನೆ ಕೇಳುವುದು ಇಲ್ಲ ಎಂದು ಹೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.